ಶ್ರೀ ಗೋಪಾಲ ಮುಕುಂದ ಕಾನಡೆ.—ನನಗೆ ಸರಿಯಾದ ಉತ್ತರವು ಬಂದಿಲ್ಲ.

ಅಧ್ಯಕ್ಷರು.—ಇಲ್ಲ, ನಾನು ತಮಗೆ ಇನ್ನೂ ಪ್ರಶ್ನೆಗಳನ್ನು ಕೇಳಲು ಅಲೋ ಮಾಡುವುದಿಲ್ಲ.

ಶ್ರೀ ಗೋಪಾಲ ಮುಕುಂದ ಕಾನಡೆ.—ಅಧ್ಯಕ್ಷರೇ, ಇದು ಹರಿಜನರ ವಿಚಾರ. ಅವರಿಗೆ ಅನ್ಯಾಯವಾಗಿದೆ. ನನಗೆ ಆ ಬಗ್ಗೆ ಸರಿಯಾದ ಉತ್ತರವು ಬಂದಿಲ್ಲ.

(ಗೊಂದಲ)

ಅಧ್ಯಕ್ಷರು.—ಅರ್ಧ ಗಂಟೆಯ ಕಾಲಾವಧಿಯ ಚರ್ಚೆಗೆ ನಾನು ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೇನೆ. ಈಗ ದಯವಿಟ್ಟು ಕಾಳಿತುಕೊಳ್ಳಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ಆ ಅವಕಾಶ ಇಂಥ ದಿವಸ ಕೊಡುತ್ತೇನೆ ಎಂದು ತಾವು ಹೇಳಲಿಲ್ಲ. ನನಗೆ ಸರಿಯಾದ ಉತ್ತರ ಬೇಕು ಎಂದು ನನ್ನ ಕೋರಿಕೆ.

ಶ್ರೀ ಬಿ. ರಾಚಯ್ಯ.—ಅರ್ಧಗಂಟೆ ಕಾಲಾವಧಿಯ ಚರ್ಚೆಗೆ ಅವಕಾಶದಲ್ಲಿ ಅವರು ತಪ್ಪು ವಿಚಾರವನ್ನು ಹೇಳಲಿ.

ಶ್ರೀ ಗೋಪಾಲ ಮುಕುಂದ ಕಾನಡೆ.—ಇದು ಹರಿಜನರ ಪ್ರಶ್ನೆ. ಅವರಿಗೆ ಅನ್ಯಾಯವಾಗಿದೆ.

ಅಧ್ಯಕ್ಷರು.—ತಾವು ಮೂರು ಪ್ರಶ್ನೆಗಳನ್ನು ಕೇಳಿದ್ದೀರಿ. ತಮಗೆ ಅವಕಾಶವನ್ನು ಕೊಡಬೇಕಾಗಿತ್ತು. ಕೊಟ್ಟಿದ್ದೇನೆ. ಈಗ ಪ್ರಶ್ನೋತ್ತರ ವೇಳೆ ಮುಗಿದಿದೆ. ಉಳಿದ ಪ್ರಶ್ನೆಗಳು ಲ್ಯಾಪ್ಸ್ ಆಗಬೇಕಾಗಿತ್ತು. ಆದರೂ ಅವಕಾಶವನ್ನು ಕೊಟ್ಟಿದ್ದೇನೆ. ಆದುದರಿಂದ ಈಗ ದಯವಿಟ್ಟು ತಾವು ಕಾಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರಿಗೆ ಅರ್ಧ ಗಂಟೆಯ ಕಾಲಾವಧಿ ಚರ್ಚೆಗೆ ಯಾವ ದಿವಸ ಅವಕಾಶವನ್ನು ಕೊಡುತ್ತೀರಿ ಎಂದು ಹೇಳಿ.

ಅಧ್ಯಕ್ಷರು.—ಮಂಗಳವಾರ ದಿವಸ ಸ್ಪೆಷಲ್ ಕೇಸ್ ಎಂದು ಪರಿಗಣಿಸಿ ಅವಕಾಶವನ್ನು ಕೊಡಗಿತ್ತೇನೆ.

ರಾಜ್ಯದಲ್ಲಿ ನೋಂದಾಯಿಸಲ್ಪಟ್ಟ ಸಹಕಾರ ಸಂಘಗಳು

೨೦೪೪. ಶ್ರೀ ಪಿ. ಬಿ. ಓಂಕಾರ ಮೂರ್ತಿ (ಕಡೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕದಲ್ಲಿ ಸಹಕಾರ ಸಂಘಗಳು ಕಾಯ್ದೆ ಪ್ರಕಾರ ನೋಂದಾಯಿಸಲ್ಪಟ್ಟಿರುವ ಸಹಕಾರ ಸಂಘಗಳು ಎಷ್ಟು ?

ಆ) ಅವುಗಳಲ್ಲಿ ಯಾವ ಯಾವ ರೀತಿಯ ಸಹಕಾರ ಸಂಘಗಳು ಇವೆ ?

ಇ) ಇದರಲ್ಲಿ ಎಷ್ಟು ಪೂರ್ಣವಾಗಿ ಕೆಲಸ ನಿರ್ವಹಿಸುತ್ತಿರುತ್ತವೆ ?

ಈ) ಚುನಾವಣೆಗಾಗಿ ಮತ ಚಲಾವಣೆಗೋಸ್ಕರ ನೋಂದಾಯಿಸಲ್ಪಟ್ಟಿರುವ ಸಂಘಗಳು ಎಷ್ಟು? (ಕೆಲಸ ಮಾಡದೆ ಓಟಿಗಾಗಿ)

ಉ) ಲಿಕ್ವಿಡೇಷನ್ ಆಗಿರುವ ಸಹಕಾರ ಸಂಘಗಳು ಎಷ್ಟು ?

ಊ) ಹಾಗಿದ್ದಲ್ಲಿ ಕೆಲಸ ಮಾಡದೆ ಬರಿ ಚುನಾವಣೆಗೋಸ್ಕರ ಇರುವ ಸಹಕಾರ ಸಂಘಗಳನ್ನು ರದ್ದು ಪಡಿಸಲು ಕ್ರಮ ತೆಗೆದುಕೊಳ್ಳಲಾಗುವುದೇ ?

ಶ್ರೀ ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಅನ್ವಯ ನೋಂದಾವಣೆಯಾ ಹಾಲಿ ಇರುವ ಸಹಕಾರ ಸಂಘಗಳ ಸಂಖ್ಯೆ. ೨೪೫೯೮

ಅ) ಹಾಲಿ ಇರುವ ಸಹಕಾರ ಸಂಘಗಳನ್ನು ೨೯ ವಿಧಗಳಾಗಿ ವಿಂಗಡಿಸಿದೆ ಅವು:—

೧ ಅಪೆಕ್ಸ್ ಮತ್ತು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿಂಗಳು

೨ ಭೂ ಅಭಿವೃದ್ಧಿ ಬ್ಯಾಂಕುಗಳು

೩ ಪ್ರಾಥಮಿಕ ವ್ಯವಸಾಯ ಪತ್ತಿನ ಸಹಕಾರ ಸಂಘಗಳು

೪ ಧಾನ್ಯ ಬ್ಯಾಂಕುಗಳು

೫ ಪಟ್ಟಣ ಬ್ಯಾಂಕುಗಳು

ಅ) ಬ್ಯಾಂಕಿಂಗ್ ಕಾಯ್ದೆಗೆ ಒಳಪಟ್ಟವು

ಆ) ಬ್ಯಾಂಕಿಂಗ್ ಕಾಯ್ದೆಗೆ ಒಳಪಡದಿದ್ದುದು

೬ ನೌಕರ ಪತ್ತಿನ ಸಂಘಗಳು

೭ ಮಾರಾಟ ಸಂಘಗಳು ಸಾಮಾನ್ಯ

೮ ವಿಶೇಷ ವಸ್ತುಗಳ ಮಾರಾಟ ಸಂಘಗಳು

೯ ಸಕ್ಕರೆ ಕಾರ್ಖಾನೆಗಳು

೧೦ ಸಂಸ್ಕರಣ ಸಂಘಗಳು

೧೧ ಹಾಲಿನ ಸಂಘಗಳು

೧೨ ಜಾನುವಾರು ಸಂಘಗಳು

೧೩ ಬೇಸಾಯ ಸಂಘಗಳು

೧೪ ನೀರಾವರಿ ಸಂಘಗಳು

೧೫ ಮೀನುಗಾರಿಕೆ ಸಂಘಗಳು

೧೬ ನೇಕಾರರ ಸಂಘಗಳು

೧೭ ಇತರೆ ಔದ್ಯೋಗಿಕ ಸಂಘಗಳು

೧೮ ನೂಲಿನ ಗಿರಣಿಗಳು

೧೯ ವ್ಯವಸಾಯೇತರ ಪತ್ತಿನ ಸಂಘಗಳು

೨೦ ಗ್ರಾಹಕರ ಸಂಘಗಳು

೨೧ ಗೃಹ ನಿರ್ಮಾಣ ಸಂಘಗಳು

೨೨ ಔದ್ಯೋಗಿಕ ವಸಾಹತು ಸಂಘಗಳು

೨೩ ಕೂಲಿಕಾರರ ಸಂಘಗಳು

೨೪ ಅರಣ್ಯ ಕೂಲಿಕಾರರ ಸಂಘಗಳು

೨೫ ಸಾರಿಗೆ ಸಂಘಗಳು

೨೬ ಇತರೆ ಪತ್ತು ರಹಿತ ಸಂಘಗಳು

೨೭ ವಿದ್ಯುತ್ ಸಂಘಗಳು

೨೮ ಕೋ ಆಪರೇಟಿವ್ ಯೂನಿಯನ್‌ಗಳು

೨೯ ಮಹಿಳಾ ಸಂಘ ನಿಯಮಿತ.

ಆ) ಇದರಲ್ಲಿ ೧೬,೨೧ ಸಹಕಾರ ಸಂಘಗಳು ಕೆಲಸ ನಿರ್ವಹಿಸುತ್ತಿವೆ.

ಈ) ಇಲ್ಲ.

ಊ) ಪಾಲಿ ಸಮಾಪನೆಯು ಹಂತದಲ್ಲಿರುವ ಸಹಕಾರ ಸಂಘಗಳ ಸಂಖ್ಯೆ. ೪೯೫೫

ಋ) ಉದ್ಭವಿಸುವುದಿಲ್ಲ.

ಶ್ರೀ ಪಿ. ಬಿ. ಓಂಕಾರ ಮೂರ್ತಿ.—ಈ ಪ್ರಶ್ನೆಗೆ ಕೊಟ್ಟಿರುವ ಉತ್ತರ 'ಇಲ್ಲ' ಎಂದು ನಮ್ಮ ಜಿಲ್ಲೆಯನ್ನೇ ತೆಗೆದುಕೊಂಡರೆ ಕಡೂರು ತಾಲ್ಲೂಕಿನಲ್ಲಿ ಒಹುತೇಕ ಸರ್ಕಾರ ಸಂಘಗಳಿಗೆ ಬೋರ್ಡೇ ಇಲ್ಲ. ೧೯೮೭-೮೮ರ ಚುನಾವಣೆಯಲ್ಲಿ ಕೇವಲ ಒಂದು ತಿಂಗಳ ಹಿಂದೆ ರಿಜಿಸ್ಟರ್ ಮಾಡಿಸಿ ಓಟ್ ಹಾಕುವ ಹಕ್ಕನ್ನು ಪಡೆದುಕೊಂಡಿರುವುಗಳು ಇವೆ. ಆದ್ದರಿಂದ ಅವುಗಳನ್ನು ಲಿಕ್ವಿಡೇಟ್ ಮಾಡುವ ಬಗ್ಗೆ ಏನಾದರೂ ಹೇಳಿ ?

ಶ್ರೀ ಹೆಚ್. ವಿಶ್ವನಾಥಯ್ಯ.—ಈಗಿರುವ ನಿಯಮಾನುಸಾರ ಹೇಳುವುದಾದರೆ ಯಾವ ಸಹಕಾರ ಸಂಘಗಳು ಕೆಲಸ ಮಾಡುತ್ತಿಲ್ಲವೋ ಅಂತಹವುಗಳು ಓಟು ಮಾಡಲು ಅವಕಾಶ ಇಲ್ಲ. ಆದ್ದರಿಂದ ಓಟಿಗಾಗಿ ನೋಂದಣಿ ಮಾಡಿದೆನ್ನುವ ಪ್ರಶ್ನೆ ಉದ್ಭವಿಸುವುದಿಲ್ಲ. ಒಂದು ಪಕ್ಷ ಯಾವುದಾದರೂ ನಿಷ್ಕ್ರಿಯವಾಗಿದ್ದರೆ ನನ್ನ ಗಮನಕ್ಕೆ ತನ್ನಿ, ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಪಿ. ಬಿ. ಓಂಕಾರ ಮೂರ್ತಿ.—ಕಡೂರು ತಾಲ್ಲೂಕಿನಲ್ಲಿ ಗ್ರಾಹಕರ ಸಂಘ ಎಂದು ಒಂದು ಇದೆ. ಮೊದಲಂ ಆದನ್ನು ಲಿಕ್ವಿಡೇಟ್ ಮಾಡಿದ್ದರು. ಆಮೇಲೆ ಮತ್ತೆ ಅದು ಹೇಗೋ ರಿಜಿಸ್ಟರ್ ಮಾಡಿಸಿಕೊಂಡು ಓಟ್ ಮಾಡಿದೆ. ಅದರ ಮೇಲೆ ಏನು ಆಕ್ಷನ್ ತೆಗೆದುಕೊಳ್ಳುತ್ತೀರಿ ?

ಶ್ರೀ ಎಚ್. ವಿಶ್ವನಾಥಯ್ಯ.—ಸಹಕಾರ ಸಂಘಗಳ ಕಾಯಿದೆ ೨೭ (೭)ರ ಪ್ರಕಾರ ಕೆಲಸ ಮಾಡದ ಸಹಕಾರ ಸಂಘಗಳು ಚುನಾವಣೆಯಲ್ಲಿ ಭಾಗವಹಿಸಲು ಬರುವಂತಿಲ್ಲ. ಏನಾದರೂ ಡಿಸ್‌ಪ್ಯೂಟ್ಸ್ ಇದ್ದರೆ ಸಂಬಂಧಪಟ್ಟ ಅಧಿಕಾರಿಗಳು ಅದರ ಬಗ್ಗೆ ಕ್ರಮ ಕೈಗೊಳ್ಳುತ್ತಾರೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳನ್ನು ಕಟ್ಟುವ ಬಗ್ಗೆ.

೧೮೫೨. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೭-೮೮ನೇ ಸಾಲಿನವರೆಗೆ ನಿರ್ಮಾಣ ಮಾಡಲಾಗಿರುವ ಒಟ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಕಟ್ಟಡಗಳು ಎಷ್ಟು ಮತ್ತು ೧೯೮೮-೮೯ನೇ ಸಾಲಿನಲ್ಲಿ ಎಷ್ಟು ಹೊಸ ವಿದ್ಯಾರ್ಥಿನಿಲಯಗಳ ಕಟ್ಟಡಗಳನ್ನು ನಿರ್ಮಾಣ ಮಾಡಲಾಗುವುದು ? (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)

ಆ) ಈ ಕಾರ್ಯಕ್ರಮಕ್ಕೆ ಸರ್ಕಾರದವರು ಎಷ್ಟು ಹಣವನ್ನು ವಿನಿಯೋಗ ಮಾಡಲು ಉದ್ದೇಶಿಸಲಾಗಿದೆ ? (ಜಿಲ್ಲಾವಾರು ಮಾಹಿತಿಯನ್ನು ದಯವಿಟ್ಟು ಒದಗಿಸುವುದು)

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಪರಿಶಿಷ್ಟ ಜಾತಿ ೧೪
ಪರಿಶಿಷ್ಟ ವರ್ಗ ...
ಹಿಂದುಳಿದ ವರ್ಗ ೨೪ } ಲಗತ್ತಿಸಿದೆ.

ಹೊಸ ವಿದ್ಯಾರ್ಥಿನಿಲಯ ಪ್ರಾರಂಭ ಮಾಡುವುದು ... ೧೨೩

ಆ) ಪರಿಶಿಷ್ಟ ಜಾತಿ ... ೩೬೮.೧೮ ಲಕ್ಷ ರೂ.ಗಳು
ಪರಿಶಿಷ್ಟ ವರ್ಗ ... ... } ಲಗತ್ತಿಸಿದೆ.
ಹಿಂದುಳಿದ ವರ್ಗಗಳು ... ೩೯.೦೦ ಲಕ್ಷ ರೂ.ಗಳು